ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 17, ಸ್ಯ 1887.

ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡಿಂಟರು, ಜೀಫ್ ಜಡ್ಜ್ರೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಪ್ರಕಟನೆ.

ತಾರೀಖು 22ನೇ ನವಂಬರ್ 1887ನೇ ಇಸವಿ.

ಶ್ರೀಮ್ ಮಹಾರಾಜರವರ ಸರ್ಕಾರದ ಅನುಮತಿಯ ಪ್ರಕಾರ 1888ನೇ ಇಸವಿಗೆ ಈ ಕೆಳಗೆ ನಮೂದಾಗುವ ಕೋರ್ಟು ರಜಾ ದಿವಸಗಳ ಪಟ್ಟಿಯು ತಿಳುವಳಿಕೆ ಬಗ್ಯೆ ಈ ಮೂಲಕ ಪ್ರಸಿದ್ಧಪಡಿಸಿದೆ.

ಅದೇ ಪ್ರಕಾರ ಈ ದಿವಸಗಳು ಈ ಸೀಮೆಯಲ್ಲಿ ಎಲ್ಲಾ ಸೀವಿಲ್ ಕೋರ್ಟುಗಳಲ್ಲಿಯೂ ಸಂಪೂರ್ಣವಾದ ರಜಾದಿವಸಗಳಾಗಿ ಆಚರಿಸಕಕ್ಕದ್ದು.

ರಜಾದಿವಸಗಳ ಪಟ್ಟಿ.

ಜನವರೀ 1ರಿಂದ 5ರ ವರಿಗೆ ಉಭಯ ದಿವಸಗಳೂ ಸೇರಿ ..	ಕ್ರಿಸ್ಮಸ್ ರಜಾ
ಸದರೀ 13, 14 ಸಹ	ಪೊಂಗಲು
ಫೆಬ್ರವರೀ 10	ಶಿವರಾತ್ರೆ
ಸದರೀ 15	ಅಷ್ಟಮಿಡ್ನೆನಿಡೆ
ಸದರೀ 17	ಶ್ರೀಮ್ ಮಹಾರಾಜರವರ ಜನ್ಮದಿವಸ
ಸದರೀ 27	ಹೋಳೀ ಹಬ್ಬ.
ಮಾರ್ಚ್ 29ರಿಂದ ಏಪ್ರಿಲ್ 3ರವರಿಗೆ ಉಭಯ ದಿವಸಗಳೂ ಸೇರಿ ..	ಈಸ್ಟರ್ ರಜಾ
ಏಪ್ರೆಲ್ 4ರಿಂದ ಮೇ 15ರ ವರಿಗೆ ಉಭಯ ದಿವಸಗಳೂ ಸೇರಿ ..	ಪ್ರತಿ ವರುಷವೂ ಬರುವ 6 ವಾರದ ವಿರಾಮ.
ಮೇ 24	ಚಕ್ರವರ್ತಿನಿಯವರ ಜನ್ಮದಿವಸ
ಜೂ 20	ಶ್ರೀಮ್ ಯುವರಾಜರ ಜನ್ಮ ದಿವಸ
ಆಗಸ್ಟ್ 20, 21 ಸಹ	ಆಶ್ವಲಾಯನಾಪಸ್ತಂಭರ ಉಪಾಕರ್ಮ
ಸೆಪ್ಟಂಬರ್ 8	ಗೌರೀಹಬ್ಬ

ಸೆಪ್ಟಂಬರ್ 19	.. .. ..	ಅನಂತಚತುರ್ದಶಿ
ಅಕ್ಟೋಬರ್ 5	.. .. ..	ಮಹಾಲಯ ಅಮಾವಾಸ್ಯೆ
ಸದರೀ 6	.. .. ..	ನವರಾತ್ರೀ ಆರಂಭ ದಿವಸ
ಸದರೀ 11ರಿಂದ 20ರ ವರಿಗೆ ಉಭಯ ದಿವಸಗಳೂ ಸೇರಿ	..	ದಸರಾ ರಜಾ
ನವಂಬರ್ 3	.. .. ..	ದೀಪಾವಳಿ
ಸದರೀ 9	.. .. ..	ಪ್ರಿನ್ಸ್‌ಆಫ್‌ವೇಲ್ಸ್‌ರವರ ಜನ್ಮದಿವಸ
ಡಿಶಂಬರ್ 24ರಿಂದ 31ರ ವರಿಗೆ ಉಭಯ ದಿವಸಗಳೂ ಸೇರಿ		ಕ್ರಿಸ್‌ಮಸ್ ರಜಾ

ಈ ವರ್ಷದಲ್ಲಿ ಬರುವ ಸಮಸ್ತ ಭಾನುವಾರಗಳೂ—

ವಿಶೇಷ ವಿಷಯ—ಶ್ರೀಮ್ಮ ಮಹಾರಾಜರವರ ರಾಜ್ಯಾಭಿಷೇಕದ ದಿವಸ, ವಿನಾಯಕ ಚತುರ್ಥೀ ಮತ್ತು ಬಲಿಪಾಡ್ಯಮಿ ಹಬ್ಬಗಳು ಇವು ಭಾನುವಾರದ ದಿವಸ ಬರುವ ಕಾರಣ, ಇಲ್ಲಿ ಸೇರಿಸಿಲ್ಲ.

ಯುಗಾದೀ ಹಬ್ಬ, ಶ್ರೀರಾಮ ನವಮಿ, ಅರ್ಧಕ್ಷಡೆ, ಇವುಗಳು ಪ್ರತಿ ವರ್ಷವೂ ಬರುವ ವಿರಾವುದ ರಜಾದಲ್ಲಿ ಸಂಭವಿಸುವ ಕಾರಣ ಇಲ್ಲಿ ಸೇರಿಸಿಲ್ಲ.

ಅಪ್ಪಣೇ ಪ್ರಕಾರ,

ಎಸ್. ಅನಂತಸ್ವಾಮಿರಾವ್,
ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 1122.

ಮೃತಪಟ್ಟ ಹನುಮಂತಕಟ್ಟಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವಸಂತರಾಯಕಟ್ಟಿ ಮೃತಪಟ್ಟ ಸದರೀ ಹನುಮಂತಕಟ್ಟಿಗೆ ತಮ್ಮನಾಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಬಳಾಪುರದ ಸ್ಥಳದ ವಸಂತರಾಯಕಟ್ಟಿಯು ಚಿಕ್ಕಬಳ್ಳಾಪುರದ ವಾಸಸ್ಥನಾಗಿ ಮೃತಪಟ್ಟ ಹನುಮಂತಕಟ್ಟಿಯ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವಸಂತರಾಯಕಟ್ಟಿಯ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಂತಕಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಡಿಶಂಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತಿನೊಡನೇ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 1123.

ಮೃತಪಟ್ಟ ವಿಟೋಬಾನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ಪಾರ್ವತಾಬಾಯಿ, ಮೃತಪಟ್ಟ ಸದರೀ ವಿಟೋಬಾನಿಗೆ ಹೆಂಡತೀ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ದರ್ಜೀಪ್ಯಾಟೇ ಸ್ಥಳದ ಪಾರ್ವತಾಬಾಯಿಯು ದರ್ಜೀಪ್ಯಾಟೇ ವಾಸಸ್ಥನಾಗಿ ಮೃತಪಟ್ಟ ವಿಟೋಬಾನಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆಖಾಯಿಷ್ ಮಾಡಿರುತ್ತಾಳೆ.